ಲಂಬಾಣಿ ರಾಮಾಯಣ: ಸಾಂಸ್ಕೃತಿಕ ಅವಲೋಕನ

ಸೋಮಶೇಖರ ಎಂ.*

DOI: https://doi.org/10.5281/zenodo.21794564

ABSTRACT

ಭಾರತದಲ್ಲಿ ಅಸಂಖ್ಯಾತ ಬುಡಕಟ್ಟು ರಾಮಾಯಣಗಳಿವೆ. ಜಾತಿ, ಧರ್ಮ, ಸಮಾಜ ಹೀಗೆ ಹಲವು ನೆಲೆಗಳಲ್ಲಿ ಕಾಣಿಸಿಕೊಂಡಿರುವ ರಾಮಾಯಣಗಳು; ವಸ್ತುವಿನ ವಿಚಾರದಲ್ಲಿ ಒಂದೇ ಆಗಿದ್ದರೂ, ಅದನ್ನು ಅಭಿವ್ಯಕ್ತಪಡಿಸುವ ಮಾಧ್ಯಮ ವಿಭಿನ್ನವಾಗಿವೆ. ಲಿಖಿತ ರಾಮಾಯಣ ಅಥವಾ ಶಿಷ್ಟ ರಾಮಾಯಣದ ಕಥಾವಸ್ತುವಿನಲ್ಲಿ ಅಲ್ಪಸ್ವಲ್ಪ ಮಾರ್ಪಾಡುಗಳೊಂದಿಗೆ ರಚನೆಯಾಗಿರುವ ಮೌಖಿಕ ನೆಲೆಯ ರಾಮಾಯಣಗಳು ವಿಶಿಷ್ಟವಾಗಿ ಕಾಣಿಸಿಕೊಳ್ಳುತ್ತವೆ. ಲಿಖಿತ ಕಾವ್ಯಕ್ಕೂ; ಜನಪದ ಕಾವ್ಯಕ್ಕೂ ಇರುವ ವ್ಯತ್ಯಾಸವೆಂದರೆ ಕಥಾವಸ್ತುವಿನ ನಿರೂಪಣೆ. ಮೂಲ ಕಾವ್ಯಕ್ಕೆ ಧಕ್ಕೆಯಾಗದಂತೆ; ಕಾವ್ಯದ ಆಶಯವನ್ನು ಬಿಗಿಯಾಗಿಸುತ್ತಲೇ ಜನಪದರು ತಮ್ಮದೇ ಶೈಲಿಯಲ್ಲಿ ಕಟ್ಟಿಕೊಡುವ ರಾಮಾಯಣದ ಕಥೆಯು ಆಲಿಸಲು, ವಾಚಿಸಲು ಯೋಗ್ಯವಾಗಿರುತ್ತವೆ. ಬುಡಕಟ್ಟು ಜನರ ಕಥಾ ನಿರೂಪಣಾ ಶೈಲಿಯು ತಮ್ಮ ಬದುಕಿನೊಡನೆ ಹೆಣೆದುಕೊಂಡಿರುತ್ತವೆ. ಪಂಡಿತಮಾನ್ಯರಿಗೆ ರಾಮ, ಸೀತೆ ಸಾಮಾನ್ಯರಂತೆ ಕಂಡರೆ, ಜನಪದರಿಗೆ ದೈವಪುರುಷರಂತೆ ಕಾಣುವರು. ಹಾಗಾಗಿ ಇಂಥ ಪಾತ್ರಗಳು ಜನಪದರ ಮೇಲೆ ನೇರವಾಗಿ ಪ್ರಭಾವಬೀರುವುದಲ್ಲದೇ ತಮ್ಮ ಬದುಕು ಕಟ್ಟಿಕೊಳ್ಳಲು ರಾಮಾಯಣದ ಮೌಲ್ಯಗಳು ಆದರ್ಶವಾಗುತ್ತವೆ. ಇಂಥ ಆದರ್ಶ ಮೌಲ್ಯಗಳನ್ನು ಒಳಗೊಂಡಿರುವ ರಾಮಾಯಣ ಕೃತಿಯು ಬುಡಕಟ್ಟು ಲಂಬಾಣಿಗರ ಸಂಸ್ಕೃತಿಯಲ್ಲಿ ಹೇಗೆ ಮಿಳಿತಗೊಂಡಿವೆ ಎಂಬುದನ್ನು ಈ ಲೇಖನವು ಪ್ರಸ್ತುತ ಪಡಿಸುತ್ತದೆ.

KEYWORDS: ಲಂಬಾಣಿ ರಾಮಾಯಣ, ವಾಲ್ಮೀಕಿ ರಾಮಾಯಣ, ಭಜನೆ, ಶಿವಧನಸ್ಸು, ಲಂಬಾಣಿ ಮದುವೆ ಶಾಸ್ತ್ರಗಳು.

* **ಡಾ. ಸೋಮಶೇಖರ ಎಂ.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮೋಕ, ಬಳ್ಳಾರಿ ಜಿಲ್ಲೆ.

ವಿಶ್ವದ ಅನೇಕ ಬುಡಕಟ್ಟುಗಳ ಪೈಕಿ ಶ್ರೀಮಂತ ಸಂಸ್ಕೃತಿ, ಸಂಪ್ರದಾಯ ಹೊಂದಿರುವ ಜನಾಂಗವೆಂದರೆ ಲಂಬಾಣಿ ಜನಾಂಗ. ಇವರ ಭಾಷೆ, ವೇಷಭೂಷಣ, ಕರಕುಶಲತೆ, ಆಹಾರ ಪದ್ಧತಿ, ಹಬ್ಬಗಳು, ಮದುವೆ, ನ್ಯಾಯ ಪದ್ಧತಿ ಮುಂತಾದ ಸಂಪ್ರದಾಯಗಳು ವೈವಿಧ್ಯಮಯ ಸಾಂಸ್ಕೃತಿಕ ಲೋಕದ ಸೃಷ್ಟಿಗೆ ಕಾರಣವಾಗಿವೆ. ಇವರ ಸಂಸ್ಕೃತಿಯ ಚಲನಶೀಲತೆಗೆ ಚೈತನ್ಯ ನೀಡಿವೆ. ಅದು ಸ್ಥಾವರಗೊಳ್ಳದೇ ಜಂಗಮ ಸ್ವರೂಪ ಪಡೆದುಕೊಂಡು ಇವತ್ತಿಗೂ ಜೀವಂತವಾಗಿದೆ. ಲಂಬಾಣಿ ಸಾಂಸ್ಕೃತಿಕ ಪರಂಪರೆಯಲ್ಲಿ ಅಸಂಖ್ಯಾತ ಮೌಖಿಕ ಸಾಹಿತ್ಯ ಪ್ರಕಾರಗಳಿವೆ. ಲಂಬಾಣಿ ಭಾಷೆ (ಗೋರಬೋಲಿ)ಗೆ ಲಿಪಿಯಿಲ್ಲ. ಲಿಪಿಯಿಲ್ಲ ಮಾತ್ರಕ್ಕೆ ತನ್ನ ಸಂಸ್ಕೃತಿಯನ್ನು ಅವಸಾನಕ್ಕೊಡ್ಡದೇ; ತನ್ನ ಅಸ್ಮಿತೆಯನ್ನು ಮೌಖಿಕ ಪರಂಪರೆಯ ಮುಖೇನ ಜೀವಂತವಾಗಿಸಿದೆ. ಅಂದರೆ ಹಾಡು, ಕಥೆ, ಗಾದೆ, ಒಗಟು, ರಾಮಾಯಣ, ಮಹಾಭಾರತ, ಕಥನಗೀತೆ ಮುಂತಾದ ಜನಪದ ಕಲಾ ಪ್ರಕಾರಗಳು ಮೌಖಿಕ ಪರಂಪರೆಯಲ್ಲಿ ಉಳಿದುಕೊಂಡು ತಲೆಯಿಂದ ತಲೆಗೆ, ಬಾಯಿಯಿಂದ ಬಾಯಿಗೆ ಸಾಗುತ್ತಲೇ ಬಂದಿವೆ. ಕವಿರಾಜಮಾರ್ಗಕಾರನ 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳು' ಎಂಬ ಮಾತು ಲಂಬಾಣಿಗರಿಗೂ ಅನ್ವಯಿಸುವುದು. ನಿದರ್ಶನವೆಂದರೆ; ವಾಲ್ಮೀಕಿ ರಾಮಾಯಣ ಮತ್ತು ವ್ಯಾಸನ ಮಹಾಭಾರತದ ಕಥೆಯನ್ನು ತಮ್ಮದೇ ಶೈಲಿಯಲ್ಲಿ ಹಾಡುವುದು. ಈ ಮೌಖಿಕತೆ ಕಥನ ಕವನದ ಸ್ವರೂಪದಲ್ಲೋ, ಪುರಾಣ ಪ್ರವಚನಗಳ ರೂಪದಲ್ಲೋ ಇರುವುದು. ಮದುವೆ, ಹಬ್ಬಗಳು, ಹುಟ್ಟು-ಸಾವು ಮುಂತಾದ ಸಂದರ್ಭಗಳಲ್ಲಿ ಪುರಾಣದ, ಸಾಂಸ್ಕೃತಿಕ ನಾಯಕರ, ರಾಜರ ಬದುಕಿನ ಸುಖ-ದುಃಖಗಳ ಕಥೆಗಳನ್ನು ಹೇಳುವ ಪರಿಪಾಠವಿದೆ. ಸುಖಿಗೆ ಮನರಂಜನೆ, ದುಃಖಿಗಳಿಗೆ ಸಾಂತ್ವನ ಹೇಳುವುದು ಇಂಥ ಮೌಖಿಕ ಕಥಾನಕಗಳ ಉದ್ದೇಶ. ಇವರ ಮೌಖಿಕ ಕಥನಗಳು ಕೇವಲ ಮನರಂಜನೆ ಮತ್ತು ಸಾಂತ್ವನಕ್ಕೆ ಸೀಮಿತವಾಗದೇ; ಒಂದು ಜನಾಂಗದ ಸಾಂಸ್ಕೃತಿಕ ಮತ್ತು ಧಾರ್ಮಿಕ ಮಿಡಿತ ಹಾಗೂ ಭಾವಗಳ ಕೊಂಡಿಯಾಗಿದೆ.

ವಾಲ್ಮೀಕಿ ರಾಮಾಯಣ ಜಾಗತಿಕ ಮಟ್ಟದ ಸಾಹಿತ್ಯಕ್ಕೆ ಪ್ರೇರಣೆಯಾಗಿದೆ. "ವಾಲ್ಮೀಕಿ ರಾಮಾಯಣ, ತುಲಸಿ ರಾಮಾಯಣದಂಥ ಪಂಡಿತ ಮಂಡಳಿ ಮಾನ್ಯವಾದ ಸಂಸ್ಕೃತ ರಾಮಾಯಣಗಳು, ಕುವೆಂಪು ಅವರ ಶ್ರೀರಾಮಾಯಣ ದರ್ಶನಂ, ವೀರಪ್ಪ ಮೊಯ್ಲಿರವರ ಶ್ರೀರಾಮಾಯಣಾನ್ವೇಷಣಂ ಅಂಥ ಹೊಸ ಬಗೆಯ ಕಾವ್ಯಗಳು ಹೀಗೆ ಲಿಖಿತ ರೂಪದಲ್ಲಿರುವ ಹಲವಾರು ರಾಮಾಯಣಗಳು ನಮಗೆ ಲಭ್ಯವಾಗುತ್ತವೆ". (ಲಂ.ರಾ.ಪುಟ-1) ಇದನ್ನು ಒಪ್ಪಿಕೊಂಡರೂ; ಬುಡಕಟ್ಟು ಭಾಷೆಗಳಲ್ಲಿ ಲಿಪಿಯ ಕೊರತೆಯಿಂದಾಗಿ, ಮೌಖಿಕ ನೆಲೆಯಲ್ಲಿಯೇ ತಮ್ತಮ್ಮ ಸಂಸ್ಕೃತಿ, ಅನುಭವಗಳ ಹಿನ್ನೆಲೆಯಲ್ಲಿ ರಾಮಾಯಣದ ಕಥೆಗಳನ್ನು ಹೆಣೆದುಕೊಂಡಿವೆ. ಹೀಗೆ ಅನೇಕ "ಗ್ರಾಮೀಣ ರಾಮಾಯಣಗಳು, ಬುಡಕಟ್ಟು ರಾಮಾಯಣಗಳೇ ಶಿಷ್ಟ ರಾಮಾಯಣಗಳ ಸೃಷ್ಟಿಗೆ ವಸ್ತು ಸಾಮಗ್ರಿ, ಜೀವ ಸತ್ವವನ್ನು, ತುಷ್ಟಿ ಪುಷ್ಟಿಗಳನ್ನು ಒದಗಿಸಿವೆ." (ಲಂ.ರಾ.ಪುಟ-2) ಅಂಥ ಬುಡಕಟ್ಟು ರಾಮಾಯಣಗಳಲ್ಲಿ ಲಂಬಾಣಿ

ಬುಡಕಟ್ಟು ಕಟ್ಟಿಕೊಂಡಿರುವ ರಾಮಾಯಣವೂ ಒಂದಾಗಿದೆ.

ಡಾ. ಡಿ. ಬಿ. ನಾಯಕ ಮತ್ತು ಡಾ. ಹರಿಲಾಲ ಪವಾರ ಅವರ ಸಂಪಾದಿತ ಕೃತಿ 'ಲಂಬಾಣಿ ರಾಮಾಯಣ' ವಿಶಿಷ್ಟವಾಗಿ ಕಾಣಿಸಿಕೊಂಡಿದೆ. ಲಂಬಾಣಿ ಜನಪದರಿಂದ ಸಂಗ್ರಹಿಸಲಾಗಿರುವ ರಾಮಾಯಣದ ಮೌಖಿಕ ಕಥನಗಳು ಇಲ್ಲಿ ಸಂಕಲನಗೊಂಡಿವೆ. ಕೃತಿಯ ಅಂದಚೆಂದಕ್ಕಿಂತಲೂ ಅದರ ಒಡಲೊಳಗಿನ ಹೂರಣ ಸತ್ವಯುತವಾಗಿದೆ. ಲಂಬಾಣಿ ತಾಂಡಗಳಲ್ಲಿ ಕ್ಷೇತ್ರಕಾರ್ಯ ನಡೆಸಿ, ಶೋಧಿಸಿದ ಕಥನವು ಇಲ್ಲಿ ಮೇಳೈಸಿವೆ. ಈ ಕೃತಿಯು ಲಂಬಾಣಿ ಬುಡಕಟ್ಟಿನ ಒಡಲೊಳಗೆ ಅವಿತಿದ್ದ ರಾಮಾಯಣ ಕುರಿತಾದ ವಿದ್ವತ್ ಲೋಕವನ್ನು ಹೊರಗೆಳೆದಿದೆ. ಕೃತಿಯ ಧ್ಯೇಯೋದ್ದೇಶಗಳು, ಆಶಯ ಹಾಗೂ ವ್ಯಾಪ್ತಿಯ ಕುರಿತಂತೆ ಸಂಪಾದಕರು ಪ್ರಸ್ತಾವನೆಯಲ್ಲಿ ಸುದೀರ್ಘವಾಗಿ ಪರಿಚಯಿಸಿಕೊಟ್ಟು ಅದರ ಒಳಸುಳಿಗಳನ್ನು ಸಹೃದಯನ ಮುಂದಿಟ್ಟಿದ್ದಾರೆ.

ಈ ಕೃತಿಯಲ್ಲಿ ಒಟ್ಟು ಹತ್ತು ಅಧ್ಯಾಯಗಳಿವೆ. ಪ್ರತಿಯೊಂದು ಅಧ್ಯಾಯಗಳು ಮೂಲ ರಾಮಾಯಣದ ಕಥೆಯನ್ನು ನಿರಂತರವಾಗಿ ಮುಂದುವರೆಸಿಕೊಂಡು ಪ್ರವಹಿಸಿವೆ. ವಿಶೇಷವೆಂದರೆ ಲಂಬಾಣಿ ಜನರು ತಮ್ಮ ಸಂಪ್ರದಾಯ, ಆಚರಣೆ ಹಾಗೂ ಸಂಸ್ಕೃತಿಯೊಂದಿಗೆ ರಾಮಾಯಣದ ಕಥೆಯನ್ನು ಹೊಂದಿಸಿಕೊಂಡು ಕಟ್ಟಿಕೊಟ್ಟಿರುವುದು. ಈ ಕೃತಿಯ ಪರಿವಿಡಿಯು ಅಯೋಧ್ಯೆ ನಗರ, ಸೀತೆಯ ಜನನ, ಜನಕರಾಜನ ಮಗಳು ಸೀತೆ, ಮಿಥಿಲಾ ಪಟ್ಟಣದಲ್ಲಿ ಸೀತೆಯ ಸ್ವಯಂವರ, ರಾಮ ಸೀತೆಯರ ಮದುವೆ, ರಾಮನ ಪಟ್ಟಾಭಿಷೇಕ, ರಾಮ ಲಕ್ಷ್ಮಣರ ವನವಾಸ, ಸೀತೆಯ ವನವಾಸ ಮತ್ತು ರಾಮನೊಂದಿಗೆ ಲವಕುಶರ ಯುದ್ಧವನ್ನು ಒಳಗೊಂಡಿದೆ. ಲಂಬಾಣಿ ಭಾಷೆಯಲ್ಲಿ ರಾಮಾಯಣದ ಮೌಖಿಕ ಕಥೆಯ ಸಂಗ್ರಹವಾಗಿದ್ದರಿಂದ; ಲಂಬಾಣಿಯೇತರರಿಗೂ ಮುಖ್ಯವಾಗಿ ಕನ್ನಡಿಗರಿಗೆ ಈ ಕೃತಿಯನ್ನು ಅರ್ಥೈಸಿಕೊಳ್ಳಲು ಕನ್ನಡದಲ್ಲಿ ಭಾವಾರ್ಥವನ್ನು ಕೊಡಲಾಗಿದೆ. ಜೊತೆಗೆ ಲಂಬಾಣಿ ಪಾರಿಭಾಷಿಕ ಪದಗಳಿಗೆ ಕನ್ನಡದಲ್ಲಿ ಅರ್ಥವನ್ನು ನೀಡಲಾಗಿದೆ.

ಲಂಬಾಣಿಗರು ಭಜನೆ(ವಾಝು) ಮೇಳದವರೊಂದಿಗೆ ಹಾಡುವ ರಾಮಾಯಣದ ಹಾಡುಗಳು ಇಲ್ಲಿ ದಾಖಲಾಗಿವೆ. ಇಲ್ಲಿ ಸಂಗ್ರಹಿಸಲಾದ ಹಾಡುಗಳು ಕಥನ ಕವನಗಳಂತೆ ಕಾಣಿಸಿಕೊಂಡಿವೆ. ಹಾಡಿನ ಮೂಲಕ ಕಥೆಯ ಅಭಿವ್ಯಕ್ತಿಯಾಗಿದೆ. ಇದು ಲಂಬಾಣಿ ಜನಪದರ ವಿದ್ವತ್ತಿಗೆ ನಿದರ್ಶನವಾಗಿದೆ. ಅವರಲ್ಲಿ ಪುರಾಣ ಪ್ರವಚನದಂತೆ ಹಾಡುವ ಪದ್ಧತಿಯಿದೆ. ಇಂಥ ಭಜನೆ(ವಾಝು)ಯ ಹಾಡುಗಳನ್ನು ಪ್ರಸ್ತುತಪಡಿಸಲು ಒಂದು ತಂಡವೇ ಇರಬೇಕಾಗುತ್ತದೆ. ಕನಿಷ್ಠವೆಂದರೂ ಐದರಿಂದ ಹತ್ತು ಕಲಾವಿದರು ಬೇಕಾಗುವುದು. ಲಂಬಾಣಿ ಭಾಷೆಯ 'ವಾಝು' ಪದಕ್ಕೆ ಕನ್ನಡದಲ್ಲಿ 'ಭಜನೆ' ಎಂತಲೂ ಕರೆಯುವರು. ದೊಡ್ಡಗಾತ್ರದ 'ನಗಾರಿ'(ಚರ್ಮ ವಾದ್ಯ) ಭಜನಾ ಮೇಳದ ಆಕರ್ಷಣೆ. ಇದು ಪ್ರಮುಖ ವಾದ್ಯ. ಇದನ್ನು ಒಬ್ಬರು ಡೊಳ್ಳಿನಂತೆ ಹಾಡಿನ ಗತ್ತಿಗೆ ಅನುಸಾರವಾಗಿ ಬಾರಿಸುವರು. ಇದಕ್ಕೆ ಹಿಮ್ಮೇಳ, ಮುಮ್ಮೇಳಗಳು

ಇರುವವು. ಪ್ರಮುಖವಾಗಿ ನಗಾರಿಯನ್ನು ಬಾರಿಸುವಾತನೇ ಮುಖ್ಯ ಹಾಡುಗಾರ. ಇವನಿಗೆ ಉಳಿದ ಸದಸ್ಯರು ಧ್ವನಿಗೂಡಿಸಿ ಸಹಕರಿಸುವರು. ಸಾಮಾನ್ಯ ಭಜನೆಯಲ್ಲಿ ಕಂಸಾಳೆ, ದಮ್ಮಡಿಯಂತೆ ಲಂಬಾಣಿಗರ ವಾಝು(ಭಜನೆ)ದಲ್ಲಿ 'ಕಾಸಿನ ತಟ್ಟೆ' ಇರುವುದು. ಎಡಗೈನಲ್ಲಿ ಕಾಸಿನ ತಟ್ಟೆ ಹಿಡಿದು ಬಲಗೈಯಿಂದ ಹೊಡೆಯುವರು. ಅದು ನಗಾರಿಯ ಗತ್ತಿಗೆ, ರಾಗ ತಾಳಕ್ಕೆ ಹೊಂದುವಂತೆ ತಟ್ಟೆಯ ನಾದ ಬರುವುದು. ಈ ಮೇಳವು ಕೇಳುವ ಶ್ರೋತೃಗಳ ಮನಸೂರೆಗೊಳ್ಳುವುದು. ಇಡೀ ರಾತ್ರಿ ಇಂಥ 'ವಾಝು' ಮಾಡುವ ವಾಡಿಕೆ ಇದೆ. ಪುರಾಣ, ರಾಮಾಯಣ, ಮಹಾಭಾರತ ಕಥಾವಸ್ತುಗಳು; ಲಂಬಾಣಿಗರ ಆರಾಧ್ಯದೈವ ಸಂತ ಶ್ರೀ ಸೇವಾಲಾಲರ ಪವಾಡಗಳು, ಅವರ ಸುಧಾರಣೆಗಳು; ಮರಿಯಮ್ಮ ದೇವಿಯ ಆರಾಧನೆ ಮತ್ತು ಆದಿಶಕ್ತಿಯ ಅವತಾರಗಳು ಹಾಗೂ ಲಂಬಾಣಿ ಸಮುದಾಯದ ಸಾಂಸ್ಕೃತಿಕ ಆಚಾರ ವಿಚಾರಗಳು ವಾಝುದ ಮುಖ್ಯ ಕಥಾವಸ್ತುಗಳಾಗಿರುತ್ತವೆ.

ಇದು ಸಾಮುದಾಯಿಕ ಮತ್ತು ಸಾಮೂಹಿಕವಾದ ಜಾನಪದ ಕಲೆ. ಇಲ್ಲಿನ ಹಾಡುಗಳು ಸಾಮೂಹಿಕವಾದವುಗಳು. ಒಬ್ಬ ಗಮಕಿ ಕಥೆಯನ್ನು ವಾಚಿಸುತ್ತಿದ್ದರೆ, ಉಳಿದವರು ಅದಕ್ಕೆ ರಾಗ ಸಂಯೋಜನೆ ಮಾಡುವರು, ಪಲ್ಲವಿ, ಅನುಪಲ್ಲವಿ ಹಾಗೂ ಚರಣಗಳು ಇರುತ್ತವೆ. ತತ್ವಪದಗಳಂತೆ ಗೋಚರಿಸುವ ಇವರ ಪದಗಳು ಪುರಾಣದ ವಸ್ತುವನ್ನು ಜನಪದೀಯವಾಗಿಸಿ ಹಾಡುವ ಕಲೆ ಅದ್ಭುತವಾಗಿರುವುದು. ಹಾಡಿನ ಪ್ರತಿಯೊಂದು ಪಾದವು ಅದರ ಅರ್ಥಗರ್ಭಿತವಾದ ಭಾವವನ್ನು ಹೊರಸೂಸುವುದು. ಒಂದು ಚರಣವನ್ನು ಹಾಡಿದ ನಂತರ ಅದರ ಮುಂದುವರೆಯುವ ಕಥೆಯನ್ನು ಪುರಾಣ ಪ್ರವಚನ ಮಾಡುವವರಂತೆ ಗದ್ಯದಲ್ಲಿ ಹೇಳುವರು. ಇಂಥ ವಿಶಿಷ್ಟ ಸಂಪ್ರದಾಯದ ವಾಝು(ಭಜನೆ)ಗಳಲ್ಲಿ ಮೂಡಿ ಬರುವಂಥ ಕಥನವು ಗೀತೆಯ ಸ್ವರೂಪದಲ್ಲಿರುವುದು. ಈ ಮಾಧ್ಯಮದ ಶೈಲಿಯ ಹಿನ್ನೆಲೆಯಲ್ಲಿ ರಾಮಾಯಣದ ಕಥಾವಸ್ತುವು 'ಲಂಬಾಣಿ ರಾಮಾಯಣ'ದಲ್ಲಿ ಸಮ್ಮಿಳಿತಗೊಂಡಿದೆ.

ಗದ್ಯರೂಪದಲ್ಲಿ ಪ್ರಾರಂಭವಾಗುವ ಲಂಬಾಣಿ 'ರಾಮಾಯಣ'ದ ಕಥೆಯ ನಡೆಯು ನಂತರ 'ದ್ವಿಪದಿ' ಪದ್ಯ ರೂಪವನ್ನು ಪಡೆದುಕೊಂಡಿದೆ. ಪ್ರತಿಯೊಂದು ಪಾದದ ಕೊನೆಯಲ್ಲಿ ಅಂತ್ಯಪ್ರಾಸ ಇದೆ. ಕೃತಿಯ ಉದ್ದಕ್ಕೂ ನಿರೂಪಿಸಲ್ಪಟ್ಟ ಕಥೆಯು ಪ್ರಶ್ನೋತ್ತರ ರೂಪದ ಸಂಭಾಷಣೆಗಳನ್ನು ಹೊಂದಿದೆ. ಉದಾಹರಣೆಗೆ; ಸೀತೆಯನ್ನು ಅಪಹರಿಸಿದ ರಾವಣನನ್ನು ತಡೆಯೊಡ್ಡುವಂಥ ಪ್ರಕೃತಿಯ ಸಂಭಾಷಣೆಯನ್ನು ನೋಡುವುದಾದರೆ; ರಾಮ ಮತ್ತು ದಾಂಗುಡಿ ಬಳ್ಳಿಯ ಸಂಭಾಷಣೆಯ ಸಂದರ್ಭ ಹೀಗಿದೆ; ರಾಮ ಲಕ್ಷ್ಮಣರು ಸೀತೆಯನ್ನು ಅರಸುತ್ತ ವನವೆಲ್ಲ ಅಲೆದಾಡುತ್ತಿರುವಾಗ ಎದುರಿಗೆ 'ಪಿಲೋಣೇರ ವೇಲ್ಡಿ'(ದಾಂಗುಡಿ ಬಳ್ಳಿ)ಯು ರಾಮನೊಂದಿಗೆ ಮಾತನಾಡುವುದು. ಇದರ ಸಂಭಾಷಣೆಯ ಒಂದು ಉದಾಹರಣೆಗೆ; ಒಬ್ಬನು "ರಾಮೇನ ಕಾಂಯಿ ಬೋಲ ಪಿಲೋಣೆರ ವೆಳ್ಡಿರ"(ರಾಮನಿಗೆ ದಾಂಗುಡಿ ಬಳ್ಳಿಯು ಏನು ಹೇಳಿತು?) ಎಂದು ಪ್ರಶ್ನಿಸುವನು. ಅದಕ್ಕೆ ಮತ್ತೊಬ್ಬನು "ರಾವಣೇರ ಟಾಂಗೇನ ಮ ವಿಟಿ; ಝುಡಕಾರನ ಥೋಡಾಲೇಗೋರ" (ರಾವಣನ ಕಾಲಿಗೆ ನಾನು

ಸುತ್ತಿಕೊಂಡೆನು, ಝೂಡಿಸಿ ನನ್ನಿಂದ ಬಿಡಿಸಿಕೊಂಡನು.) ಎಂದು ಉತ್ತರಿಸುವನು. (ಲಂ.ರಾ–168) ಅಂದರೆ, ಭಜನಾ(ವಾಝು) ಮೇಳದವರು ತಾವು ಪ್ರವಚನ ಕೊಡುವಾಗ ಕಥೆಯನ್ನು ಪ್ರಶ್ನೋತ್ತರ ರೂಪದಲ್ಲಿ ಅಭಿವ್ಯಕ್ತಿಸುವುದು ಒಂದು ತಂತ್ರವಾಗಿದೆ. ಕಾರಣ ಕೇಳುಗರ ಮನಸ್ಸನ್ನು ಕೇಂದ್ರೀಕರಿಸುವುದು. ಇಂಥ ತಂತ್ರಗಾರಿಕೆ ಲಂಬಾಣಿ ಜನಪದ ಕಲೆಗಾರಿಕೆಯ ವಿಶಿಷ್ಟತೆಯಾಗಿದೆ.

ಇದರ ಸಂಗ್ರಹ ಕಷ್ಟಕರವಾದದ್ದು. ಭಜನೆ(ವಾಝು) ಮೇಳದ ಸ್ವರವನ್ನು ಲಕ್ಷ್ಯದಿಂದ ಗಮನಿಸಬೇಕು. ಲಂಬಾಣಿ ಜನಪದರು ಹಾಡುವ ಹಾಡುಗಳು ತಮ್ಮ ಸ್ವಭಾಷೆಯಲ್ಲಿಯೇ ಇರುತ್ತವೆ. ಇದರ ಸಂಗ್ರಹವನ್ನೂ ಸ್ವಭಾಷಿಗರೇ ಮಾಡಬೇಕಾಗಿದೆ. ಇಲ್ಲವೇ ಅನ್ಯ ಸಂಶೋಧಕರಿಗೆ ಲಂಬಾಣಿ ಭಾಷೆಯ ಬಗೆಗೆ ಪರಿಚಯವಿರಬೇಕಾಗುತ್ತದೆ. ರಾತ್ರಿಯೆಲ್ಲಾ ನಿದ್ರೆಗೆಟ್ಟು ಪ್ರತಿಯೊಂದು ಪದವನ್ನು, ಚರಣವನ್ನು, ಅದರ ಪಲ್ಲವಿಯನ್ನು ಸೂಕ್ಷ್ಮವಾಗಿ ಗಮನಿಸಬೇಕು. ರಾಗ, ತಾಳ, ನಾದ ಸ್ವರ ಲಯಗಳ ಏರಿಳಿತಗಳನ್ನು ಸಾವಧಾನದಿಂದ ಆಲಿಸಬೇಕು. ಸಂಗ್ರಹಕಾರರು ಇಂಥ ಕಠಿಣತೆಯನ್ನು ಅನುಭವಿಸಿ 'ಲಂಬಾಣಿ ರಾಮಾಯಣ' ಕೃತಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿ, ಓದುಗರ ಮುಂದಿಟ್ಟಿರುವುದು ಅವರ ಶ್ರಮಕ್ಕೆ ಸಿಕ್ಕಂಥ ಫಲವಾಗಿದೆ.

ಲಂಬಾಣಿ ರಾಮಾಯಣದಲ್ಲಿ ಮೂಲ ರಾಮಾಯಣದ ಏಳು ಕಾಂಡಗಳ ಕಥೆಯು ಇಲ್ಲಿ ಸಂಗ್ರಹವಾಗಿಲ್ಲ. ಲಂಬಾಣಿ ಜನಪದರು ತಮಗೆ ಎಲ್ಲೆಲ್ಲಿ ಮುಖ್ಯವೆನಿಸಿತ್ತೋ ಅಲ್ಲಿಯ ಕಥೆಗಳನ್ನು ಮಾತ್ರ ಹಾಡಿನ ರೂಪದಲ್ಲಿ ದಾಖಲಿಸಿಕೊಂಡಿದ್ದಾರೆ. ಮೂಲ ರಾಮಾಯಣದ ಬಾಲಕಾಂಡ, ಅಯೋಧ್ಯಾ ಕಾಂಡ, ಅರಣ್ಯಕಾಂಡದ ಕಥೆಯು ಹೆಚ್ಚು ಕಾಣಿಸಿಕೊಂಡಿದೆ. ಯುದ್ಧಕಾಂಡಕ್ಕೆ ಸಂಬಂಧಿಸಿದ ರಾಮ ರಾವಣರ ಯುದ್ಧ, ರಾವಣನ ಸಂಹಾರ, ಸೀತೆಯನ್ನು ಮರಳಿ ಅಯೋಧ್ಯೆಗೆ ಕರೆತರುವ ಕಥೆಯಿದೆ. ನಂತರದ ಕಥೆಯಲ್ಲಿ ಉತ್ತರಕಾಂಡಕ್ಕೆ ಸಂಬಂಧಿಸಿದ ಸೀತೆಯ ಅಗ್ನಿಪರೀಕ್ಷೆ, ವನವಾಸ, ಲವಕುಶರ ಜನ್ಮದ ಕಥೆಯಿದೆ. ಕಿಷ್ಕಿಂದಾಕಾಂಡ, ಸುಂದರಕಾಂಡಕ್ಕೆ ಸಂಬಂಧಿಸಿದ ಕಥೆಯು ವಿರಳವಾಗಿದೆ. ಮುಖ್ಯವಾಗಿ ರಾಮ ಮತ್ತು ಸೀತೆಯ ಕಥೆಯನ್ನು ಹೆಚ್ಚು ಕೇಂದ್ರೀಕರಿಸಲಾಗಿದೆ.

ಮೊದಲನೆಯದಾಗಿ; ಕಥೆಯು ಮೂಲ ರಾಮಾಯಣದಂತೆಯೇ ಪ್ರಾರಂಭವಾಗುವುದು. ಅಯೋಧ್ಯೆಯ ವರ್ಣನೆ, ದಶರಥ ಮಹಾರಾಜನ ಆಡಳಿತ, ಅವನ ಪ್ರಜಾಕಲ್ಯಾಣದ ಕಾರ್ಯಗಳು, ಅವನ ರಾಣಿಯರು, ಮಕ್ಕಳ ಸಂತಾನವಿಲ್ಲದೆ ಕೊರಗುವ ಸಂದರ್ಭ, ಸಂತಾನಹೀನತೆಯ ದುಃಖವನ್ನು ಮರೆಯಲು ವಸಿಷ್ಠ ಮುನಿಗಳಿಂದ ಸಲಹೆ ಪಡೆದು ಪುತ್ರ ಕಾಮೇಷ್ಟಿಯಾಗ ಕೈಗೊಳ್ಳುವುದು, ಭಗವಂತನ ಅನುಗ್ರಹದಿಂದ ರಾಮ, ಲಕ್ಷ್ಮಣ, ಭರತ ಮತ್ತು ಶತ್ರುಘ್ನರನ್ನು ಪಡೆದುಕೊಳ್ಳುವ ದೃಶ್ಯವಿದೆ. ಆನಂತರ ಪುತ್ರರ ಬಾಲ್ಯದ ಆಟಪಾಠವಿನೋದಗಳು, ವಿದ್ಯೆಗಳಲ್ಲಿನ ಪ್ರಾವೀಣ್ಯತೆ, ಹೀಗೆ ಮೂಲ ರಾಮಾಯಣದ ಕಥಾನಕವು ಇಲ್ಲಿ ಯಾವುದೇ ಮಾರ್ಪಾಡುಗಳಿಲ್ಲದೆ ಕಾಣಿಸಿಕೊಂಡಿದೆ. ಆದರೆ, ಪಂಡಿತ ಮಾನ್ಯರಿಂದ ಹೇಳಲ್ಪಟ್ಟಿರುವ

ವರ್ಣನಾತ್ಮಕ ಕಥೆಯು ಲಂಬಾಣಿ ಜನಪದರಿಂದ ಆಗಿಲ್ಲ. ಏಕೆಂದರೆ ಲಂಬಾಣಿಗರು 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳು' ಆಗಿದ್ದರಿಂದ ಇವರು ಹೇಳುವ ಕಥೆಗಳು ಒಂದರ್ಥದಲ್ಲಿ ಜನಪದ ಕಥೆಗಳಂತೆ ಕಾಣಿಸಿಕೊಂಡಿವೆ.

ಎರಡನೆಯದಾಗಿ; ಸೀತೆಯ ಹುಟ್ಟಿನ ವಿಚಾರವಾಗಿ ನಡೆಯುವ ಲಂಬಾಣಿಗರ ಜನಪದ ಕಥಾನಕವು ಸ್ವಾರಸ್ಯಕರವಾಗಿದೆ. ಸೀತೆಯ ಜನ್ಮ ವಿಚಾರವಾಗಿ ಹಲವು ಭಾಷೆಗಳಲ್ಲಿ ರಚನೆಯಾಗಿರುವ ರಾಮಾಯಣಗಳು ಪುರಾಣದ ವಿಚಾರಕ್ಕೋ, ಮೂಲ ರಾಮಾಯಣದ ವಿಚಾರಕ್ಕೋ, ಬುಡಕಟ್ಟುಗಳ ಗ್ರಹಿಕೆಯಲ್ಲಿ ವ್ಯಕ್ತವಾದ ಅಂಶಗಳಲ್ಲಿ ವಾದಗಳಿವೆ. ಸೀತೆಯ ಜನ್ಮದ ಕುರಿತಾದ ಚರ್ಚೆಗಳು, ದಂತಕಥೆಗಳು ಹಲವು. ಅವುಗಳ ಚರ್ಚೆ ಇಲ್ಲಿ ಅನಾವಶ್ಯಕ. ಲಂಬಾಣಿಗರು ಸೀತೆಯ ಹುಟ್ಟಿನ ಬಗೆಗೆ ಕಟ್ಟಿಕೊಂಡಿರುವ ಕಥೆ ಮೂಲಕ್ಕಿಂತಲೂ ಭಿನ್ನವಾಗಿದೆ. ಕಥೆಯು ಹೀಗಿದೆ: ಏಳು ಜನ ಸ್ವಾಮಿಗಳು(ಋಷಿಗಳು) ಹನ್ನೆರಡು ವರುಷಗಳ ಮಹಾ ತಪಸ್ಸನ್ನಾಚರಿಸುತ್ತಿದ್ದರು. ಒಂದು ದಿನ ಅವರು ಪ್ರದೇಶದಿಂದ ಪ್ರದೇಶಕ್ಕೆ ಪ್ರಯಾಣಿಸುತ್ತಿರುವಾಗ ಬಿಸಿಲಿನ ಝಳಕ್ಕೆ ಆಯಾಸಗೊಂಡು, ಬಾಯಾರಿಕೆಯಿಂದ ನದಿಯ ನೀರನ್ನು ಕುಡಿಯಲು ಬಂದರು. ನಂತರ ಆಲದ ಮರದ ನೆರಳಿನಲ್ಲಿ ವಿಶ್ರಾಂತಿ ಪಡೆದರು. ಹಣ್ಣು ಹಂಪಲುಗಳನ್ನು ತಿಂದು ನಿತ್ರಾಣಗೊಂಡಿದ್ದ ಋಷಿಗಳು ತಮ್ಮ ಹನ್ನೆರಡು ವರುಷದ ತಪಸ್ಸನ್ನು ಬಿಡಲು ನಿಶ್ಚಯಿಸಿದರು. ಹಿರಿಯ ಮುನಿಗಳು ಮೊದಲು ತಪಸ್ಸನ್ನು ಬಿಡಲು ನಿರ್ಧರಿಸಿ, ಕಿರಿಯ ಮುನಿಗೆ ಅಡುಗೆ ಮಾಡಲು ತಿಳಿಸುವರು. ಅಡುಗೆ ಸಿದ್ಧಗೊಂಡಿತು. ಮರದಲ್ಲಿದ್ದ ಹದ್ದು ಸರ್ಪವೊಂದನ್ನು ಬೇಟೆಯಾಡಿ ತಿನ್ನುತ್ತಿರುವಾಗ ಸರ್ಪದ ರಕ್ತವು ಮುನಿಗಳು ಮಾಡಿದ್ದ ಅಡುಗೆ ಪಾತ್ರೆಯಲ್ಲಿ ಬಿದ್ದಿತು. ಕಪ್ಪೆಯೊಂದು ಅದನ್ನು ಗಮನಿಸಿ, ಮುನಿಗಳು ಅನ್ನ ತಿಂದು ಸಾಯುವರೆಂದು ಅಡುಗೆ ಪಾತ್ರೆಯಲ್ಲಿ ಬಿದ್ದಿತು. ಹಸಿವಿನಿಂದ ಬಳಲುತ್ತಿದ್ದ ಮುನಿಗಳು ಅನ್ನದ ಪಾತ್ರೆ ನೋಡುವರು. ಕಪ್ಪೆ ಬಿದ್ದಿದ್ದನ್ನು ಕಂಡು ಅನ್ನವೆಲ್ಲ ಚೆಲ್ಲಿದರು. ಕಪ್ಪೆಯ ಸಮಾಧಿ ಮಾಡಿದರು. ಅಲ್ಲಿಂದ ಮುಂದಕ್ಕೆ ಹೊರಟು ಹೋಗುವರು.

ಹೀಗೆ ಸಾಗುತ್ತಿರುವಾಗ ಬೇಸಿಗೆ ಮುಗಿದು ಮಳೆಗಾಲವು ಸಮೀಪಿಸಿತು. ಭೋರ್ಗರೆದು ಮಳೆಯು ಸುರಿಯಲಾರಂಭಿಸಿತು. ಪರಿಣಾಮವಾಗಿ ನದಿ ತೊರೆಗಳು, ಹಳ್ಳಕೊಳ್ಳಗಳು ಮೈದುಂಬಿದವು. ಅವುಗಳಲ್ಲಿ ಕಪ್ಪೆಗಳು ಉತ್ಪತ್ತಿಯಾಗಿ ವಟಗುಟ್ಟುತ್ತಿದ್ದವು. ಕಪ್ಪೆಯ ಧ್ವನಿಯು ಋಷಿಗಳಿಗೆ ಅಪಶಕುನವಾದಂತಾಗಿ, ಈ ಹಿಂದೆ ಕಪ್ಪೆಯ ಸಮಾಧಿ ಮಾಡಿದ್ದ ಸ್ಥಳಕ್ಕೆ ಹಿಂತಿರುಗಿದರು. ಕಪ್ಪೆಯ ಸಮಾಧಿಯನ್ನು ಅಗೆದು ನೋಡಿದರು. ಆಶ್ಚರ್ಯ! ಕಾದಿತ್ತು. ಸಮಾಧಿಯಿಂದ ಜೀವಂತ ಕಪ್ಪೆಯು ನೆಗೆದು ಮೇಲಕ್ಕೆ ಬಂದಿತು. ಕಪ್ಪೆಯು ತನಗೆ ಮಾತು ಬರುವಂತೆ ದಯಪಾಲಿಸಬೇಕೆಂದು ಋಷಿಗಳಿಗೆ ಕೇಳಿತು. ಅಂತೆಯೇ ವರದಾನ ನೀಡಿದರು. ಋಷಿಗಳಿಗೆ ಹಿಂದೆ ನಡೆದ ಘಟನೆಗಳನ್ನು ಒಂದೊಂದಾಗಿ ವಿವರಿಸಿ ಹೇಳಿತು. ತಮ್ಮ ಜೀವ ಉಳಿಸಿದ ಕಪ್ಪೆಗೆ ಋಷಿಮುನಿಗಳು "ಏಯಿ ಮಿಟಕಿನ ಆಪಣ ಛೋರಿ ಬಣಾಮರೆ" (ಲಂ.ರಾ.–80) (ಅರ್ಥ: ಈ ಕಪ್ಪೆಯನ್ನು ನಾವು ಹುಡುಗಿ ಮಾಡೋಣ)

ಎಂದು ಯೋಚಿಸಿ, ಕಪ್ಪೆಯ ಋಣಸಂದಾಯಕ್ಕೆ ಮುಂದಾಗುವರು. ಕಪ್ಪೆಗೆ ಹೆಣ್ಣಿನ ಜೀವಕಳೆಯನ್ನು ದಯಪಾಲಿಸಿದರು. ಅವಳನ್ನು ಮಗಳೆಂದು ಸ್ವೀಕರಿಸಿದರು. ಅವಳನ್ನು ಆಶ್ರಮದಲ್ಲಿ ಸಾಕಿದರು. ಹೀಗೆ ಕಾಲಕಳೆಯುತ್ತಿರಲು, ಒಂದು ದಿನ ಮಗಳು ತಮ್ಮ ತಂದೆಯರ ಲಂಗೋಟಿ ವಸ್ತ್ರಗಳನ್ನು ಶುಚಿಗೊಳಿಸಲು ನದಿಗೆ ತೆರಳಿದಳು. ಅದರಲ್ಲಿ ಕಿರಿಯ ಅಪ್ಪನ ಲಂಗೋಟಿಯಲ್ಲಿದ್ದ ಪುರುಷ ಕಲೆಯು ಶುಚಿಯಾಗದೇ ಉಳಿದಿತ್ತು. ಆ ಹುಡುಗಿಯು ಎಷ್ಟೇ ಪ್ರಯತ್ನಿಸಿದರೂ ಅದು ಶುಚಿಯಾಗಲಿಲ್ಲ. ಕೊನೆಗೆ ಹುಡುಗಿಯು ತನ್ನ ಹಲ್ಲಿನಿಂದ ಪುರುಷ ಕಲೆಯನ್ನು ಕಚ್ಚಿದಳು. ಅದು ಪುರುಷ ರಸವಾಗಿ(ವೀರ್ಯ) ಬಾಯಿಯಿಂದ ಹೊಟ್ಟೆಗೆ ಸೇರಿಕೊಂಡಿತು. ಹುಡುಗಿ ಬಸುರಿಯಾದಳು. ದಿನದಿಂದ ದಿನಕ್ಕೆ ಹೊಟ್ಟೆಯಲ್ಲಿ ಮಗುವಿನ ಬೆಳವಣಿಗೆ ಆಯಿತು. ಇದನ್ನು ಗಮನಿಸಿದ ಋಷಿಮುನಿಗಳು ಮಗಳ ಈ ಸ್ಥಿತಿಗೆ ಕಾರಣ ಯಾರು? ಮುಂತಾಗಿ ವಿಚಾರಿಸಿದರು. ನಡೆದ ಘಟನೆಯನ್ನು ಹುಡುಗಿಯು ವಿವರಿಸಿದಳು. ಆ ಹುಡುಗಿಯನ್ನು ಋಷಿಗಳು ತಮ್ಮ ತಪೋಬಲದಿಂದ ಮೂರ್ನಾಲ್ಕು ವರುಷದ ಮಗುವನ್ನಾಗಿ ಮಾಡಿದರು. ಆ ಮಗುವನ್ನು ಪೆಟ್ಟಿಗೆಯಲ್ಲಿಟ್ಟು ಅದರ ಮೇಲೆ 'ಹುಡುಗಿಯ ಹೆಸರು ಸೀತೆ ಎಂದೂ, ಸಪ್ತ ಮಹರ್ಷಿಗಳು ಹುಡುಗಿಯ ತಂದೆ ಎಂದೂ ಬರೆದು' ನದಿಯಲ್ಲಿ ತೇಲಿಬಿಟ್ಟರು. ಆ ಪೆಟ್ಟಿಗೆಯು ತೇಲುತ್ತಾ ಮುಂದಿನ ಪ್ರದೇಶಕ್ಕೆ ಸಾಗಿತು. ಹೀಗೆ ಏಳು ಋಷಿಗಳ ಮಗಳು ಸೀತೆ ಆದಳು.

ಮೂರನೆಯದಾಗಿ: ಸೀತೆಯ ಜನಕ ಯಾರೆಂದು ತಿಳಿಸುವ ಕ್ರಮವು ಲಂಬಾಣಿಗರಲ್ಲಿ ವಿಶಿಷ್ಟವಾಗಿ ಸೃಷ್ಟಿಯಾಗಿದೆ. ಲಂಬಾಣಿ 'ರಾಮಾಯಣ'ದಲ್ಲಿ ಚಿತ್ರಿತವಾಗಿರುವ ಸೀತೆಯ ಹುಟ್ಟು, ಅವಳ ಬಾಲ್ಯವನ್ನು ಚಿತ್ರಿಸಿದ್ದಾರೆ. ಸೀತೆ ಜನಕ ಮಹಾರಾಜನ ಹೊಟ್ಟೆಯಲ್ಲಿ ಹುಟ್ಟಿದ ಮಗಳಲ್ಲ. ಸಾಕು ಮಗಳು. ಮೀನುಗಾರರು ಮಿಥಿಲಾ ನಗರದ ಹತ್ತಿರದ ನದಿಯಲ್ಲಿ ಮೀನು ಹಿಡಿಯುತ್ತಿರುವಾಗ ಮೀನಿನ ಬಲೆಗೆ ಒಂದು ಪೆಟ್ಟಿಗೆ ಸಿಗುವುದು, ಅದರಲ್ಲಿ ಒಂದು ಹೆಣ್ಣು ಮಗು ಇರುವುದು. ಮೀನುಗಾರನೊಬ್ಬನಿಗೆ ಮಕ್ಕಳಾಗದೇ ಇರುವುದರಿಂದ ತಾನೇ ಸಾಕುವೆನೆಂದು ಉಳಿದ ಮೀನುಗಾರರಿಗೆ ತಿಳಿಸುವನು. ಅದರಲ್ಲೊಬ್ಬ ಮೀನುಗಾರ ಈ ವಿಷಯವನ್ನು ಮಿಥಿಲೆಯ ಮಹಾರಾಜ ಜನಕನಿಗೆ ತಿಳಿಸುವನು. ರಾಜನಿಗೂ ಮಕ್ಕಳಿರುವುದಿಲ್ಲ. ಸುದ್ದಿಯ ತಿಳಿದ ರಾಜನು ಮೀನುಗಾರನಿಗೆ ದೊರೆತಿದ್ದ ಮಗು ಇರುವ ಪೆಟ್ಟಿಗೆ ತಂದೊಪ್ಪಿಸುವಂತೆ ಮಂತ್ರಿಯನ್ನು ಕಳುಹಿಸಿದನು. ರಾಜಾಜ್ಞೆಯಂತೆ ಮೀನುಗಾರನು ತನಗೆ ಸಿಕ್ಕಿದ್ದ ಮಗು ಇರುವ ಪೆಟ್ಟಿಗೆಯನ್ನು ತಂದು ರಾಜನಿಗೆ ಒಪ್ಪಿಸುವನು. ಆ ಮಗುವನ್ನು ರಾಜಪರಿವಾರವೂ ಅತ್ಯಂತ ಪ್ರೀತಿಯಿಂದ ಅರಮನೆಗೆ ಸ್ವಾಗತಿಸಿತು. ಈಗಾಗಲೇ ಪೆಟ್ಟಿಗೆಯ ಮೇಲೆ ಋಷಿಮುನಿಗಳು ಬರೆದಿದ್ದ ಬರಹವನ್ನು ರಾಜನು ಓದುವನು. ಅದರಂತೆ ಮಗುವಿನ ನಾಮಕರಣವೂ ಮಾಡಲಾಯಿತು. ಮಗುವಿಗೆ 'ಸೀತೆ' ಎಂದೂ ಕರೆದರು. ಜನಕ ಮಹಾರಾಜ ಮತ್ತು ರಾಣಿಯರ ಮಡಿಲಲ್ಲಿ ಸೀತೆ ಸುಖವಾಗಿ ಬೆಳೆದಳು. ಅವರೆಲ್ಲರೂ ಸಂತೋಷದ ಕಡಲಲ್ಲಿ ತೇಲಾಡಿದರು.

ನಾಲ್ಕನೆಯದಾಗಿ; ಸೀತೆಯ ಸ್ವಯಂವರ(ಮದುವೆ ನಿಶ್ಚಯ) ಏರ್ಪಡಿಸುವ

ಪ್ರಸಂಗ. ಜನಕ ಮಹಾರಾಜ ಸೀತೆಯ ರೂಪ ಲಾವಣ್ಯಕ್ಕೆ ಸರಿಹೊಂದುವಂಥ ವೀರನೂ, ಶೂರನೂ ಆಗಿರುವ ಹಾಗೂ ಉದಾತ್ತಗುಣ ಸಂಪನ್ನನಾಗಿರುವಂಥ ವರನನ್ನು ಹುಡುಕಲು ಮಂತ್ರಿಗೆ ಆಜ್ಞೆ ಮಾಡಿದನು. ವರನ ಆಯ್ಕೆಗೆ 'ಸ್ವಯಂವರ'ವನ್ನು ಏರ್ಪಡಿಸುವಂತೆ ತಿಳಿಸಿದನು. ಸ್ವಯಂವರದಲ್ಲಿ ಸೀತೆಗೆ ದೊರೆತಿದ್ದ ಶಿವಧನಸ್ಸನ್ನು ಯಾರು ಎತ್ತುವರೋ ಅವರು ಸೀತೆಯ ಪತಿಯಾಗುವರು ಎಂದು ಸಂದೇಶ ಹೊರಡಿಸಿದರು. ಸ್ವಯಂವರದಲ್ಲಿ ಋಷಿಮುನಿ ವಿಶ್ವಾಮಿತ್ರನು ರಾಮ ಲಕ್ಷ್ಮಣರನ್ನು ಜೊತೆಯಲ್ಲಿ ಕರೆದುಕೊಂಡು ಸ್ವಯಂವರಕ್ಕೆ ಆಗಮಿಸಿದರು. ದೇಶ ವಿದೇಶಗಳಿಂದ ರಾಜರು, ರಾಜಕುಮಾರರು ಆಗಮಿಸಿದ್ದರು. ಅಂತೆಯೇ ಲಂಕೆಯ ರಾವಣನು ಸ್ವಯಂವರದಲ್ಲಿ ಪಾಲ್ಗೊಂಡನು. ಜನಕ ಮಹಾರಾಜನು ಸ್ವಯಂವರದಲ್ಲಿ ನೆರೆದಿದ್ದ ಸಭಾಸದರ ಮುಂದೆ 'ಶಿವಧನಸ್ಸು' ಇಟ್ಟರು. ಸ್ಪರ್ಧೆಯ ನಿಯಮಗಳನ್ನು ತಿಳಿಸುವಂತೆ ಮಂತ್ರಿಗೆ ಸೂಚಿಸುವನು. ರಾಜಾಜ್ಞೆಯಂತೆ ಪ್ರಧಾನಿಯು ''ಧನಕಬಾಣೇನ ಪಾಡಜೇನರ । ಅಸೋ ವೇರಾಳುತಿ ಸೀತಾರ ಸಗಾಯಿರ। ಪರಧಾನ ಸಭಾಮ ವಿಚಾರ ಕಳಾಯೋರ (ಲಂ.ರಾ.–110) (ಅರ್ಥ: ಧನಸ್ಸು ಬಾಣ ಎತ್ತುವವನಿಗೆ, ಅಂಥ ವೀರನೊಂದಿಗೆ ಸೀತೆಯ ನಿಶ್ಚಿತಾರ್ಥ ಎಂದು ಪ್ರಧಾನಿಯು ಸಭೆಗೆ ತಿಳಿಸಿದನು.) ಅಂತೆಯೇ ಸ್ವಯಂವರ ಆರಂಭಗೊಳ್ಳುವುದು. ಸ್ವಯಂವರಕ್ಕೆಂದು ಬಂದಿದ್ದ ವೀರಾಧಿವೀರರೆಲ್ಲರೂ ಶಿವಧನಸ್ಸನ್ನು ಎತ್ತಲು ಹರಸಾಹಸ ಪಟ್ಟು ಅವಮಾನಿತರಾದರು. ನಂತರ ರಾವಣನು ಧನಸ್ಸನ್ನು ಎತ್ತಲಾಗದೇ ಅವಮಾನಿತಗೊಂಡನು. ಇದು ಅವನಲ್ಲಿ ಸೀತೆಯ ಕುರಿತು ದ್ವೇಷದ ಕಿಚ್ಚು ಹುಟ್ಟಲು ಕಾರಣವೂ ಆಯಿತು.

ರಾವಣನ ತರುವಾಯ ಲಕ್ಷ್ಮಣನು ಸ್ವಯಂವರದಲ್ಲಿ ತಾನು ಶಿವಧನಸ್ಸು ಎತ್ತುವುದಾಗಿ ರಾಮನಲ್ಲಿ ವಿಜ್ಞಾಪಿಸಿದನು. ಲಕ್ಷ್ಮಣನ ತಪಸ್ಸು, ವ್ರತಗಳನ್ನು ಕಂಡು ಧನಸ್ಸನ್ನು ಎತ್ತಲು ರಾಮ ಆಜ್ಞೆಯಿತ್ತನು. ಆಗ ಲಕ್ಷ್ಮಣನು ಧನಸ್ಸನ್ನು ಎತ್ತಲು ಸ್ಪರ್ಧೆಗೆ ಇಳಿದನು. ''ಧನಕ ಬಾಣೇಕನ ಲಚಮಣ ಚಲೋಜಾರೋರ । ನವನ ಬಾಣೇನ ಪಾಡತೊ ಸಲಾಮಿ ವಿಯರ । ಘಡಿಭರ ವಿಚಾರ ಕೀದೊ ಮನೇಮರ । ಡಾವೆ ಟಾಂಗೇತಿ ಬಾಣೇನ ವಚಕಾಳೋರ। ಜಮಣೆ ಹಾತೇತಿ ಧನಕ ಬಾಣೇನ ಪಾಡೋರ'' (ಲಂ.ರಾ.117) (ಧನಸ್ಸು ಬಾಣದ ಹತ್ತಿರಕ್ಕೆ ಲಕ್ಷ್ಮಣನು ಬರುವನು, ಬಾಗಿ ಬಾಣವನ್ನೆತ್ತಿದರೆ ಶರಣಾದಂತೆ ಭಾವಿಸಿದ, ಮನದಲ್ಲಿ ಒಂದು ಕ್ಷಣ ಆಲೋಚಿಸಿದನು, ಎಡಗಾಲಿಂದ ಬಾಣವನ್ನು ಮೇಲಕ್ಕೆ ಚಿಮ್ಮಿಸಿದ, ಬಲಗೈಯಿಂದ ಧನಸ್ಸು ಎತ್ತಿಕೊಂಡನು) ಹೀಗೆ ಒಂದೇ ಪ್ರಯತ್ನಕ್ಕೆ ಬಾಣ ಎತ್ತಿಕೊಂಡನು. ಇದನ್ನು ಗಮನಿಸುತ್ತಿದ್ದ ಸೀತೆಯು ಮಹಡಿಯಿಂದಿಳಿದು ಲಕ್ಷ್ಮಣನಿಗೆ ವಿಜಯ ಮಾಲೆಯ ತೊಡಿಸಲು ಮುಂದಾದಳು, ಆ ಸಂದರ್ಭದಲ್ಲಿ ಲಕ್ಷ್ಮಣನು ಸೀತೆಯನ್ನು ತಡೆದು ''ಮಾರೊ ಭೀಯಾರಜ ಸಗಾಯಿ ವಿಕೊಂತಿಯ। ಪಾಗಡಿ ಮಾರೆ ಭೀಯಾನ ಘಾಲ ಕೇರೋರ'' (ಲಂ.ರಾ.117) (ಅರ್ಥ: ನನ್ನ ಅಣ್ಣನ ಮದುವೆ ನಿಶ್ಚಿತಾರ್ಥವಿನ್ನು ಆಗಿಲ್ಲ, ಆ ಪೇಟವನ್ನು ನನ್ನ ಅಣ್ಣನಿಗೆ ತೊಡಿಸಬೇಕೆಂದು ಹೇಳುವನು.) ಎಂದನು. ಆಗ ಸೀತೆಯು ಲಕ್ಷ್ಮಣನ ಅಣತಿಯಂತೆ ರಾಮನಿಗೆ ಮಾಲಾರ್ಪಣೆಗೈದು ಕಿರೀಟಧಾರಣೆ

ಮಾಡಿದಳು. ಜೊತೆಗೆ ರಾಮನನ್ನು ಮದುವೆಯ ವರನೆಂದು ಸ್ವೀಕರಿಸಿದಳು. ಇದು ಮೂಲ ರಾಮಾಯಣಕ್ಕಿಂತ ವಿಭಿನ್ನವಾಗಿ ಕಾಣಿಸಿಕೊಂಡಿದೆ. ಸ್ವಯಂವರದಲ್ಲಿ ರಾಮನ ಬದಲು ಲಕ್ಷ್ಮಣನು ಧನಸ್ಸನ್ನು ಎತ್ತುವುದು, ಸೀತೆಯನ್ನು ಲಕ್ಷ್ಮಣ ವರಿಸದೇ ರಾಮನಿಗೆ ಸಮರ್ಪಿಸುವುದು ಪುರಾಣದ ಕಥೆಯನ್ನು ಸ್ಮರಣೆಗೆ ತರುತ್ತದೆ.

ಐದನೆಯದಾಗಿ; ರಾಮ–ಸೀತೆಯ ಮದುವೆ ಮಾಡುವುದು. ಈ ಕಥೆಯನ್ನು ಲಂಬಾಣಿಗರು ತಮ್ಮ ವಿವಾಹ ಪದ್ಧತಿಯಂತೆ ವರ್ಣಿಸಿರುವುದು ವಿಶೇಷವಾಗಿದೆ. ಅಂದರೆ ಲಂಬಾಣಿಗರು ರಾಮ ಮತ್ತು ಸೀತೆಗೆ ತಮ್ಮ ಸಮುದಾಯದ ವ್ಯಕ್ತಿಗಳಂತೆ ಕಂಡಿದ್ದಾರೆ. ರಾಮ ಸೀತೆಯ ಮದುವೆ ನಿಶ್ಚಯದ ಸುದ್ದಿ ಅಯೋಧ್ಯೆ ದಶರಥ ಮಹಾರಾಜನಿಗೆ ಮುಟ್ಟಿತು. ಈ ಸುವಿಚಾರದಿಂದ ದಶರಥ ಮಹಾರಾಜ ಮತ್ತು ಪರಿವಾರದವರು ಸಂತಸಪಟ್ಟರು. ನಂತರ ಎಲ್ಲರೂ ಅಯೋಧ್ಯೆ ನಗರದಿಂದ ಮಿಥಿಲಾ ನಗರಕ್ಕೆ ಮದುವೆ ದಿಬ್ಬಣ ಹೊರಟರು. ಎರಡೂ ಕಡೆಯ ಬೀಗರು, ನೆಂಟರು ಒಟ್ಟಿಗೆ ಸೀತೆ ರಾಮರ ಮದುವೆ ಶಾಸ್ತ್ರಗಳನ್ನು ನೆರವೇರಿಸಲು ಅಣಿಯಾದರು. ಆ ದೃಶ್ಯದ ವರ್ಣನೆ ಅದ್ಭುತವಾಗಿ ಮೂಡಿಬಂದಿದೆ.

ಆರನೆಯದಾಗಿ; ರಾಮನಿಗೆ ಪಟ್ಟಾಭಿಷೇಕಕ್ಕೆ ಸಿದ್ಧಪಡಿಸುವ ಸಂದರ್ಭ. ದಶರಥ ಮಹಾರಾಜನಿಗೆ ಮುಪ್ಪು ಆವರಿಸಿದ ನಂತರ ರಾಮನಿಗೆ ರಾಜ್ಯಾಭಿಷೇಕ ಮಾಡಬೇಕೆಂದಿರುವ ವಿಚಾರವು ಮಂಥರೆಯಿಂದ ಕೈಕೇಯಿ ರಾಣಿಗೆ ತಿಳಿದು; ದಶರಥನಿಂದ ಕೈಕೇಯು ರಾಮನಿಗೆ ಹದಿನಾಲ್ಕು ವರುಷ ವನವಾಸ, ಭರತನಿಗೆ ಪಟ್ಟಾಭಿಷೇಕ ಮಾಡುವಂತೆ ವಚನ ಪಡೆದುಕೊಳ್ಳುವುದು, ರಾಮ ಸೀತೆ ಮತ್ತು ಲಕ್ಷ್ಮಣರು ವನವಾಸಕ್ಕೆ ತೆರಳುವುದು, ಅಯೋಧ್ಯಾ ನಗರದ ಸಮಸ್ತ ಜನತೆ ದುಃಖಿತರಾಗುವುದು, ಅರಮನೆಯಲ್ಲಿ ದಶರಥ ಮಗನ ವನವಾಸದ ಕೊರಗಿನಲ್ಲಿ ವಿಧಿವಶನಾಗುವುದು, ಭರತ, ಶತ್ರುಘ್ನರು ರಾಮನನ್ನು ಮರಳಿ ಅಯೋಧ್ಯೆಗೆ ಕರೆತರುವ ಪ್ರಯತ್ನ ಮಾಡುವುದು, ಅದು ವಿಫಲಗೊಳ್ಳುವುದು, ರಾಮನ ಕಿರೀಟವನ್ನು ಪಡೆದುಕೊಂಡು ಅರಮನೆಯ ರಾಜಸಿಂಹಾಸನದ ಮೇಲೆ ವಿರಾಜಮಾನನಾಗಿ ಭರತ ಆಡಳಿತ ನಡೆಸುವುದು ಇದು ಮೂಲ ರಾಮಾಯಣದಂತೆಯೇ ಲಂಬಾಣಿ ರಾಮಾಯಣದಲ್ಲೂ ನೆರವೇರಿದೆ.

ಏಳನೆಯದಾಗಿ; ರಾಮ ಸೀತೆ ಹಾಗೂ ಲಕ್ಷ್ಮಣರ ವನವಾಸದ ವಿಚಾರ ಲಂಬಾಣಿ ರಾಮಾಯಣದಲ್ಲಿ ಚಿತ್ರಿತಗೊಂಡಿರುವುದು. ಕೈಕೇಯಿ ರಾಣಿಯ ಕುಟಿಲತೆಯ ಫಲವಾಗಿ ರಾಮ ವನವಾಸಕ್ಕೆ ತೆರಳುವನು. ಜೊತೆಗೆ ಸೀತೆ ಮತ್ತು ಲಕ್ಷ್ಮಣನು ಹೋಗುವರು. ಗಂಗಾನದಿಯಲ್ಲಿ ಮಿಂದೆದ್ದು ಮುಂದಕ್ಕೆ ನಡೆದರು. ಹಲವು ಋಷಿಮುನಿಗಳ ಶುಭಹಾರೈಕೆಯೊಂದಿಗೆ ಪಂಚವಟಿಗೆ ತಲುಪಿದರು. ಅಲ್ಲಿ ಗುಡಿಸಲೊಂದು ನಿರ್ಮಿಸಿಕೊಂಡು ನೆಲೆಸಿದರು. ಅಲ್ಲಿಂದ ರಾವಣನ ತಂಗಿ ಶೂರ್ಪನಖಿಯ ಉಪಟಳ ಹೆಚ್ಚಿತು. ಅವಳನ್ನು ಲಕ್ಷ್ಮಣ ಅವಮಾನಗೊಳಿಸಿದನು. ಈ ವಿಚಾರ ತನ್ನ ಸಹೋದರರಿಗೆ ತಿಳಿದು ರಾಮ ಲಕ್ಷ್ಮಣರ ಮೇಲೆ ದಾಳಿ

ಮಾಡುವರು. ದಾನವರನ್ನೂ ಸಂಹರಿಸುವರು. ನಂತರ ರಾವಣನಿಗೆ ವಿಚಾರಗೊತ್ತಾಗಿ ಸೀತೆಯನ್ನು ಅಪಹರಿಸುವ ಯೋಜನೆ ಸಿದ್ಧಗೊಳ್ಳುವುದು ಇವೆಲ್ಲವೂ ಮೂಲ ರಾಮಾಯಣದಂತೆಯೇ ಲಂಬಾಣಿ ಜನಪದರಲ್ಲೂ ಕಾಣಿಸಿಕೊಂಡಿದೆ. ಯಾವುದೇ ಮಾರ್ಪಾಡುಗಳು ಇಲ್ಲಿ ಆಗಿಲ್ಲ. ಆದರೆ, ರಾವಣನು ಸೀತೆಯನ್ನು ಅಪಹರಿಸುವಾಗ ತಡೆಯೊಡ್ಡುವ ಜಟಾಯು, ಜಾಂಬವಂತ ಲಂಬಾಣಿಗರಲ್ಲಿ ಕಾಣುವುದಿಲ್ಲ. ಬದಲಾಗಿ ಪರಿಸರದ ಮರಗಿಡಬಳ್ಳಿಗಳು ರಾವಣನನ್ನು ತಡೆದು ನಿಲ್ಲಿಸುವ ಮತ್ತು ಸೀತೆಯ ಅಪಹರಣದ ವಿಚಾರವಾಗಿ ರಾಮನಿಗೆ ತಿಳಿಸುವುದು ಕಂಡುಬರುವುದು.

ಎಂಟನೆಯದಾಗಿ; ಸೀತಾಪಹರಣದ ಪ್ರಸಂಗ. ರಾಮಾಯಣದಲ್ಲಿ ರಾವಣ ಸೀತೆಯನ್ನು ಅಪಹರಿಸಿಕೊಂಡು ಹೋಗುವ ಪ್ರಸಂಗ ಎಲ್ಲರಿಗೂ ತಿಳಿದಿರುವ ಸಂಗತಿಯೇ. ಇಲ್ಲಿಯೂ ಅದೇ ಬಗೆಯಾದ ಕಥೆ ಇದೆ. ಆದರೆ, ರಾವಣ ಸೀತೆಯನ್ನು ಅಪಹರಿಸಿದ ಸಂದರ್ಭದಲ್ಲಿ ಜಟಾಯುವಿನ ಬದಲಾಗಿ ದಾಂಗುಡಿ ಬಳ್ಳಿ, ಎಕ್ಕೆಗಿಡ, ಬಾರೆಗಿಡ, ಕಾರಿಕಾಯಿ ಗಿಡ ಹೀಗೆ ಇಡೀ ಪ್ರಕೃತಿ ಒಟ್ಟಾಗಿ ಸೀತೆಯ ಅಪಹರಣವನ್ನು ತಡೆದು ನಿಲ್ಲಿಸುವ ಪ್ರಯತ್ನ ಮಾಡುವುದು. ಆದರೆ ಮಾಯಾವಿ ಖರನ ಕುಯುಕ್ತಿಗೆ ಪ್ರಕೃತಿಯ ಪ್ರಯತ್ನವು ವಿಫಲವಾಗುವುದು. ರಾವಣ ಸೀತೆಯನ್ನು ಅಪಹರಿಸುವ ಕ್ರಮ ಪಂಡಿತ ಮಾನ್ಯ ರಾಮಾಯಣದಲ್ಲಿನ ಕಥನ ಶೈಲಿಯು ಒಂದು ಬಗೆಯದ್ದಾದರೆ, ಲಂಬಾಣಿ ರಾಮಾಯಣದಲ್ಲಿನ ಕಥನ ವಿಧಾನವೇ ಬೇರೆಯಾಗಿದೆ. ಅಂದರೆ, ಮೂಲ ರಾಮಾಯಣದಲ್ಲಿ ಹಾಗೂ ಲಂಬಾಣಿ ರಾಮಾಯಣದಲ್ಲಿ ರಾವಣ ಸನ್ಯಾಸಿಯ ವೇಷಧಾರಿಯಾಗಿ ಸೀತೆಯನ್ನು ಭಿಕ್ಷೆ ನೀಡುವಂತೆ ಕೇಳಿಕೊಳ್ಳುವುದು ಸಹಜವಾಗಿದೆ. ಆದರೆ, ಮೂಲ ರಾಮಾಯಣದಲ್ಲಿ ರಾವಣನು ಸೀತೆಯು ಭಿಕ್ಷೆ ನೀಡುವಾಗ ಕೈ ಹಿಡಿದು ಎಳೆದುಕೊಂಡು ಹೋಗುವನು, ಅದಕ್ಕೆ ವ್ಯತಿರಿಕ್ತವಾಗಿ ಲಂಬಾಣಿ ರಾಮಾಯಣದಲ್ಲಿ ರಾವಣನು ಸೀತೆಯನ್ನು ತನ್ನ ಜೋಳಿಗೆಯಲ್ಲಿಟ್ಟುಕೊಂಡು ಹೋಗುವನು ಎಂಬ ಚಿತ್ರಣವಿದೆ. ಇಲ್ಲಿ ಎಳೆದುಕೊಂಡು ಹೋಗುವ ಪ್ರಕ್ರಿಯೆಗೂ, ಭಿಕ್ಷಾ ಜೋಳಿಗೆಯಲ್ಲಿ ಸೆರೆಹಿಡಿಯುವ ಪ್ರಕ್ರಿಯೆಗಳಲ್ಲಿ ಒಂದು ಅನುಸಂಧಾನವಿದೆ. ಅದೆಂದರೆ, ರಾಮ ಮತ್ತು ಸೀತೆ ಲಂಬಾಣಿಗರಿಗೆ ಸಾಕ್ಷಾತ್ ದೇವರು. ಸೀತೆಯ ಬಗೆಗಿನ ಪೂಜ್ಯನೀಯ ಭಾವವು ಅವಳ ಅಪಹರಣವನ್ನು ಸಾತ್ವಿಕವಾಗಿಸಿದೆ. ರಾವಣ ಸೀತೆಯನ್ನು ಅಪಹರಿಸಿಕೊಂಡು ಲಂಕೆಗೆ ಹೋಗುವ ದಾರಿಯುದ್ದಕ್ಕೂ ದಾಂಗುಡಿ ಬಳ್ಳಿ, ಕಾರಿಕಾಯಿ ಮರ, ಎಕ್ಕೆ ಗಿಡ, ಬಾರೆಗಿಡ ರಾವಣನನ್ನು ಪ್ರಶ್ನಿಸುತ್ತವೆ, ತಡೆಯುತ್ತವೆ. ಅದಾವುದನ್ನು ಲೆಕ್ಕಿಸದೇ ರಾವಣ ಸೀತೆಯನ್ನು ಲಂಕೆಗೆ ಕೊಂಡೊಯ್ಯುವನು. ಉದಾಹರಣೆಗೆ– ಮೊದಲನೆಯದು; ಸೀತೆಯ ಅಪಹರಣವಾಗಿದೆ ಎಂಬ ಅನುಮಾನದೊಂದಿಗೆ ಅಪಹರಣದ ಹೆಜ್ಜೆಜಾಡಿನ ಮೂಲವನ್ನು ಹುಡುಕುತ್ತಾ ಬರುತ್ತಿರುವ ರಾಮ ಲಕ್ಷ್ಮಣರನ್ನು ಪಿಲೋಣೇರ ವೆಳ್ಡಿ(ದಾಂಗುಡಿಬಳ್ಳಿ)ಯು ತಡೆದು ನಿಲ್ಲಿಸಿ; "ರಾವಣೇರ ಟಾಂಗೇನ ಮ ವಿಟಿ ಝುಡಕಾರನ ಛೋಡಲೇಗೋರ" (ಲಂ. ರಾ.168) (ಅರ್ಥ: ರಾವಣನ ಕಾಲಿಗೆ ಸುತ್ತಿ ಬೀಳಿಸುವ ಪ್ರಯತ್ನ ಮಾಡಿದೆ. ಅವನು ಜೋಲಿಹೊಡೆದು ಮುಂದೆ ಹೋದನು.) ಎಂದಿತು. ಎರಡನೆಯದು; ಮೆಂಡಳೇರ

ಝೂಡ(ಕಾರಿಕಾಯಿ ಗಿಡ) ರಾಮನಿಗೆ “ಸೀತಾನ ಲೇಜೋಮತ ಕೇನ ರಾವಣೇನ ಥಾಮೊರ” (ಅರ್ಥ: ಸೀತೆಯನ್ನು ಒಯ್ಯಬೇಡ ಎಂದು ಸಾಧು ವೇಷಧಾರಿ ರಾವಣನಿಗೆ ಎದುರಾಗಿ ನಿಲ್ಲಿಸಿದೆ) ಆದರೆ ಅವನು ನನ್ನನ್ನು ದೂಡಿ ಮುಂದಕ್ಕೆ ಹೋದ ಎಂದಿತು. ಮೂರನೆಯದು; ರಾಮನು ಸೀತೆಯನ್ನು ಹುಡುಕುತ್ತಾ ಕಾಡಿನಲ್ಲಿ ಸಾಗುತ್ತಿರುವಾಗ ಮಾರ್ಗದಲ್ಲಿ ಎಕ್ಕೆಗಿಡವು ಎದುರಾಯಿತು. ಅದು ರಾಮ ಲಕ್ಷ್ಮಣರನ್ನು ನಿಲ್ಲಿಸಿ “ಏಕ ಬೀರ ಜೋಳಿಮಾಯಿತಿ ಬಚಾಡೊ ಕೇನ ರೋರೀತಿರ । ವು ಸಾಧು ಮನ ಖುಂದನ ಜಾರೋ ಜೇ ವೇಳಾನರ। ಮಾರೊ ದೂದ ವೋರ ಆಂಕಿಮ ಪಾಡೋರ । ಅತೋಯಿ ಪಾಪಿ ಸಾಮಿ ಆಂಕಿ ಮಸಳತೊ ಆಂಗ ಚಲೋಗೋರ।” (ಲಂ.ರಾ.169) (ಅರ್ಥ: ಒಬ್ಬ ಸಾಧು ತನ್ನ ಜೋಳಿಗೆಯಲ್ಲಿ ಒಬ್ಬಳು ಹೆಣ್ಣು ಮಗಳನ್ನು ಹಾಕಿದ್ದ. ಅವಳು ಬಿಕ್ಕಿ ಬಿಕ್ಕಿ ಅಳುತ್ತಿರುವುದನ್ನು ನೋಡಿದೆ. ಅವನು ನನ್ನನ್ನು ತುಳಿದು ಮುಂದಕ್ಕೆ ಹೋದ, ನಾನು ತಡೆಯಲು ಅವನ ಕಣ್ಣಲ್ಲಿ ಎಕ್ಕೆಹಾಲನ್ನು ಚಿಮ್ಮಿಸಿದೆ. ನನ್ನ ಹಣ್ಣಿನ ನೂಲಿನ ಹಿಂಜಿಯ ಅವನ ಕಣ್ಣಲ್ಲಿ ಹಾಕಿದೆ. ಆ ಪಾಪಿ ಕಣ್ಣ ತಿಕ್ಕುತ್ತ ಮುಂದಕ್ಕೆ ಹೋದ) ಎಂದು ಹೇಳಿತು. ನಾಲ್ಕನೆಯದು: ಬಾರೆಗಿಡವು ರಾಮ ಲಕ್ಷ್ಮಣರನ್ನು ಕರೆದು “ಪಾಪಿ ಸಾಮಿರ ಜೋಳಿಮ ಏಕ ಬೀರ ರೋರಿರ । ಬೀರೇನ ಬಚಾಂವು ಕೇನ ಸಾಮಿರ ಟಾಂಗೇರೆಪರ ತುಟಪಡೋರ । ಸೀತಾನ ಏಯಿ ವಾಟೇತಿ ರಾವಣ ಲಂಕಾನ ಲೇಗೋರ” (ಲಂ.ರಾ.ಪುಟ:170) (ಅರ್ಥ: ಆ ಪಾಪಿ ಸಾಧು ಒಬ್ಬ ಹೆಣ್ಣು ಮಗಳನ್ನು ಜೋಳಿಗೆಯಲ್ಲಿ ಹಾಕಿಕೊಂಡು ದಾರಿ ಹಿಡಿದು ಮುಂದಕ್ಕೆ ಹೋಗುತ್ತಿದ್ದ. ಆ ಹೆಣ್ಣನ್ನು ಉಳಿಸಲು ಆ ಸಾಧುವಿನ ಕಾಲ ಮೇಲೆ ಬಿದ್ದುಬಿಟ್ಟೆ. ಅವನು ಕಾಲನ್ನು ತಿಕ್ಕುತ್ತ ಇದೇ ಮಾರ್ಗದಲ್ಲಿ ಮುಂದಕ್ಕೆ ಹೊರಟನು) ಎಂದು ಹೇಳಿತು. ಈ ಎಲ್ಲ ಸನ್ನಿವೇಶಗಳ ಹಿಂದೆ ಲಂಬಾಣಿ ಸಮುದಾಯದ (ಮೌಖಿಕ ನೆಲೆಯಲ್ಲಿ) ಸಂಸ್ಕೃತಿಯ ಚಹರೆಗಳು ಮೇಳೈಸಿವೆ ಎಂಬುದು ಗಮನಾರ್ಹ. ಅಂದರೆ, ರಾವಣನು ಸೀತೆಯ ವಿಚಾರದಲ್ಲಿ ರಾಮ ಲಕ್ಷ್ಮಣರಿಗೆ ಮಾಡಿದ ಅನ್ಯಾಯ, ವಂಚನೆಯನ್ನು ಪ್ರಕೃತಿಯೂ ಸಹಿಸದು ಎಂಬುದು ಜನಪದರ ನಂಬಿಕೆ. ಪ್ರಕೃತಿಯು ನ್ಯಾಯದ ಪರವಾಗಿರುತ್ತದೆಂಬುದನ್ನು ಲಂಬಾಣಿ ಮೌಖಿಕ ನೆಲೆಯಲ್ಲಿ ಗೋಚರಿಸಿದೆ.

ಒಟ್ಟಿನಲ್ಲಿ ಲಂಬಾಣಿ ರಾಮಾಯಣದಲ್ಲಿ ಉಲ್ಲೇಖಗೊಂಡಂತೆ ರಾಮನ ಕೃಪಾಶೀರ್ವಾದದಿಂದ ಪೂಜ್ಯತೆ ಪಡೆದುಕೊಂಡ ಕಾರಿಕಾಯಿ, ಎಕ್ಕೆಗಿಡ, ಬಾರೆಗಿಡದ ಮಹತ್ವಕ್ಕೆ ಲಂಬಾಣಿ ಮದುವೆ ಶಾಸ್ತ್ರಗಳಲ್ಲಿ ಮೊದಲ ಪ್ರಾಶಸ್ತ್ಯವಿದೆ. ಹೇಗೆಂದರೆ, ಲಂಬಾಣಿಗರು ತಮ್ಮ ಮದುವೆಗಳಲ್ಲಿ ಪದ್ಧತಿಯಂತೆ ಕುಂಬಾರರ ಮನೆಯಿಂದ ಸಣ್ಣ ಮಣ್ಣಿನ ಮಡಿಕೆ ಕುಡಿಕೆಗಳನ್ನು ತಂದು ಮದುವೆ ಮಂಟಪದಲ್ಲಿ ಇಡುತ್ತಾರೆ. ಅಡವಿಯಿಂದ ಎಕ್ಕೆಯ ಟೊಂಗೆ ತಂದು ಮಂಟಪದಲ್ಲಿ ಕಟ್ಟುತ್ತಾರೆ. ಬಾರೆಮರದಿಂದ ಸಿದ್ಧಪಡಿಸಿದ ಒನಕೆ ಮದುವೆ ಮಂಟಪದಲ್ಲಿ ನೆಡುವುದು, ವಧುವರರಿಗೆ ಅರಿಶಿಣ–ಮೆಹಂದಿ ಹಚ್ಚುವುದು, ನಂತರ ಸ್ನಾನ ಮಾಡಿಸಿ, ಮಡಿವಸ್ತ್ರಗಳಿಂದ ಅಲಂಕರಿಸಿ, ಸಪ್ತಪದಿ ತುಳಿಯುವರು. ಮದುವೆ ಮುಗಿದ ಬಳಿಕ ವಧುವರರಿಗೆ ಉಡುಗರೆಗಳನ್ನು ನೀಡಿ ಗಂಡನ ಮನೆಗೆ ಕಳುಹಿಸಿಕೊಡುವರು. ಈ ಎಲ್ಲಾ ಮದುವೆ ಕಾರ್ಯಗಳು

ಪದ್ಧತಿಯಂತೆ ಶಾಸ್ತ್ರೋಕ್ತವಾಗಿಯೇ ನಡೆಯುವುದು. ಇಂಥ ವಿಶಿಷ್ಟ ಸಂಪ್ರದಾಯ ಲಂಬಾಣಿಗರಲ್ಲಿ ಇನ್ನೂ ಜೀವಂತವಿದೆ. ಇಂಥ ಆಚರಣೆಗಳಲ್ಲಿ ಸಾಂಸ್ಕೃತಿಕ ಚಹರೆಗಳು ವಿಭಿನ್ನ ಆಯಾಮಗಳಲ್ಲಿ ತಲತಲಾಂತರದಿಂದಲೂ ಸಾಗಿಬಂದಿದೆ. ಹಾಗಾಗಿ 'ಲಂಬಾಣಿ ರಾಮಾಯಣ' ಕೃತಿ ಅವರ ಸಾಂಸ್ಕೃತಿಕ ಹಿರಿಮೆಗೆ ಸಾಕ್ಷಿಯಾಗಿವೆ.

ಪರಾಮರ್ಶನ ಗ್ರಂಥಗಳು:

1. ನಾಯಕ ಡಿ.ಬಿ. ಮತ್ತು ಹರಿಲಾಲ ಪವಾರ (ಸಂ.), (2020), ಲಂಬಾಣಿ ರಾಮಾಯಣ, ಗೊಟಗೋಡಿ: ಕರ್ನಾಟಕ ಜಾನಪದ ವಿಶ್ವವಿದ್ಯಾಲಯ.
2. ರಾಠೋಡ್ ಪಿ.ಕೆ., (2015), ಬಂಜಾರ ಸಂಸ್ಕೃತಿ ಕಥನ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
3. ನಾಯಕ ಡಿ.ಬಿ. (ಸಂ.), (2021), ಲಂಬಾಣಿ ಸಾಂಸ್ಕೃತಿಕ ಪದಕೋಶ (ಸಂಪುಟ–17), ಗೊಟಗೋಡಿ: ಕರ್ನಾಟಕ ಜಾನಪದ ವಿಶ್ವವಿದ್ಯಾಲಯ.